ವಿ-72-(40)

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್ ಇವರು ನಿಯಮ 72ರಡಿಯಲ್ಲಿ ನೀಡಿರುವ ಸೂಚನೆಗೆ ಹೇಳಿಕೆ.**

**ಸೂಚನೆ**

**"ಕರ್ನಾಟಕ ಲೋಕಸೇವಾ ಆಯೋಗದ 1998,1999, 2004, 2011 ಮತ್ತು 15ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಬಗ್ಗೆ ವಿಚಾರಣೆಗೆ ವಹಿಸಿರುವುದರಿಂದ ಸಿಬ್ಬಂದಿಗಳಿಗೆ ವರ್ಗಾವಣೆ ಇಲ್ಲದೆ ಅಕ್ರಮಗಳು ನಡೆಯುತ್ತಿದ್ದು, ಈ ಸಿಬ್ಬಂದಿಗಳನ್ನು ಆಯೋಗದಿಂದ ಬೇರೆ ಇಲಾಖೆಗಳಿಗೆ ಅಥವಾ ಬೇರೆ ಇಲಾಖೆಗಳಿಂದ ಕೆ.ಪಿ.ಎಸ್.ಸಿ.ಗೆ ನಿಯೋಜಿಸಿಕೊಳ್ಳಲು ಪಿ.ಸಿ. ಹೋಟಾ ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸಬೇಕೆನ್ನುವ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದಿರುತ್ತಾರೆ".**

***

ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಜಾರಿಯಲ್ಲಿರುವ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಪರಿಷ್ಕರಿಸುವ ಸಲುವಾಗಿ ಶ್ರೀ ಪಿ.ಸಿ.ಹೋಟಾ, ಭಾ.ಆ.ಸೇ.(ನಿ) ಇವರ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯ ಶಿಫಾರಸ್ಸಿನಂತೆ ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಎಲ್ಲಾ ವರ್ಗದ ಅಧಿಕಾರಿ/ನೌಕರರ ಶೇ.50ರಷ್ಟು ಹುದ್ದೆಗಳನ್ನು ಪ್ರತಿ ಬದಲಾವಣೆ/ನಿಯೋಜನೆ (One-to-one basis) ಮಾಡುವ ಬಗ್ಗೆ ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಷರತ್ತುಗಳು) ವಿನಿಯಮಗಳು 1957ಕ್ಕೆ ತಿದ್ದುಪಡಿ ತರಬೇಕಾಗಿರುತ್ತದೆ.

ಈ ಕುರಿತು ಸರ್ಕಾರದ ಕಾರ್ಯದರ್ಶಿಗಳು, ಸಿಆಸು ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಲೋಕಸೇವಾ ಆಯೋಗ ಮತ್ತು ಸಚಿವಾಲಯದಲ್ಲಿ ಮಾತ್ರ ವೃಂದ ಮತ್ತು ವೇತನದಲ್ಲಿ ಸಮಾನತೆ ಇರುವುದರಿಂದ ಆಯೋಗದಿಂದ ಸಚಿವಾಲಯಕ್ಕೆ ಮತ್ತು ಸಚಿವಾಲಯದಿಂದ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಮಾತ್ರ ಅಧಿಕಾರಿ/ನೌಕರರನ್ನು ನಿಯೋಜಿಸಬಹುದೆಂದು ತೀರ್ಮಾನಿಸಲಾಗಿರುತ್ತದೆ.

ಆಯೋಗದಿಂದ ಸಚಿವಾಲಯಕ್ಕೆ ಮತ್ತು ಸಚಿವಾಲಯದಿಂದ ಆಯೋಗಕ್ಕೆ ಶೇ.50ರಷ್ಟು ಹುದ್ದೆಗಳನ್ನು ಪ್ರತಿ ಬದಲಾವಣೆ (One-to-one basis) ಆಧಾರದ ಮೇಲೆ ನಿಯೋಜನೆ ಮಾಡಲು ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಷರತ್ತುಗಳು), ವಿನಿಯಮಗಳು, 1957ಕ್ಕೆ ಹಾಗೂ ಸಚಿವಾಲಯದ ವೃಂದ ಮತ್ತು ನೇಮಕಾತಿ ನಿಯಮಗಳು ಇವೆರಡಕ್ಕೂ ತಿದ್ದುಪಡಿ ತರಬೇಕಾಗಿರುತ್ತದೆ.

ಅದರಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸುವ ಕುರಿತಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ವೃಂದ ಮತ್ತು ನೇಮಕಾತಿ ನಿಯಮಗಳನ್ನು 1957ನೇ ಸಾಲಿನಲ್ಲಿ ರಚಿಸಲಾಗಿರುವುದರಿಂದ, ಸದರಿ ನಿಯಮಗಳ ಸಮಗ್ರ ತಿದ್ದುಪಡಿಗೆ ಪ್ರಸ್ತಾವನೆಯನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಪಡೆದು, ತಿದ್ದುಪಡಿ ಮಾಡಲು ತೀರ್ಮಾನಿಸಿ, ಕರ್ನಾಟಕ ಲೋಕಸೇವಾ ಆಯೋಗದ (ಸೇವಾ ಷರತ್ತುಗಳು) ವಿನಿಯಮಗಳು, 1957ರ ಸಮಗ್ರ ಪರಿಷ್ಕರಣೆಗಾಗಿ ಪ್ರಸ್ತಾವನೆ ಸಲ್ಲಿಸುವಂತೆ ಆಯೋಗಕ್ಕೆ ಸೂಚಿಸಲಾಗಿದೆ. ಆಯೋಗವು ಅತೀ ಶೀಘ್ರದಲ್ಲಿಯೇ ವೃಂದ ಮತ್ತು ನೇಮಕಾತಿ ಕುರಿತ ನಿಯಮಗಳ ಸಮಗ್ರ ಪರಿಷ್ಕರಣೆಗೆ ಪ್ರಸ್ತಾವನೆಯನ್ನು ಕಳುಹಿಸಲಾಗುವುದೆಂದು ತಿಳಿಸಿರುತ್ತದೆ.

ಪ್ರಸ್ತಾವನೆಯನ್ನು ಸ್ವೀಕರಿಸಿದ ತರುವಾಯ, ಕರ್ನಾಟಕ ಲೋಕಸೇವಾ ಆಯೋಗದ (ಸೇವಾ ಷರತ್ತುಗಳು) ವಿನಿಯಮಗಳು, 1957ಕ್ಕೆ ಹಾಗೂ ಸಚಿವಾಲಯದ ವೃಂದ ಮತ್ತು ನೇಮಕಾತಿ ನಿಯಮಗಳೆರಡಕ್ಕೂ ಅಗತ್ಯ ತಿದ್ದುಪಡಿ ಮಾಡಿ ಹೋಟಾ ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಬಿ.ಎಸ್.ಯಡಿಯೂರಪ್ಪ

**ಸಂಖ್ಯೆ: ಸಿಆಸುಇ 76 ಎಸ್‌ಎಲ್‌ಎ 2020.** (ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ